# ಮನೋವೈಜ್ಞಾನಿಕ ನೆಲೆಯಲ್ಲಿ ಸಾಹಿತ್ಯ ರಚನೆ

ಶ್ವೇತಾ. ಎಂ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ವಿದ್ಯಾವರ್ಧಕ ಸಂಘ, ಪ್ರಥಮ ದರ್ಜೆ ಕಾಲೇಜು
ಬಸವೇಶ್ವರನಗರ, ಬೆಂಗಳೂರು – 560 079

**ಸಾರಾಂಶ:**

ಈ ಭೂಮಿಯ ಮೇಲೆ ಜೀವಿಸಿರುವ ಜೀವಿಗಳಲ್ಲಿ ಮಾನವ ಬುದ್ಧಿವಂತ ಪ್ರಾಣಿ, ಬುದ್ಧಿ ಮತ್ತು ಮಾತಿನಿಂದ ಮಾತ್ರ ವಿಭಿನ್ನ. ಆದರೆ, ಈ ಬುದ್ಧಿವಂತ ಜೀವಿಯ ಮನೋವಿಚಾರ ಅರಿಯುವುದು ಬಹಳ ಕಷ್ಟದ ಕೆಲಸ. ಮನಸ್ಸಿನ ಹರಹುವಿಕೆ, ಸಾಮರ್ಥ್ಯ, ಅಗಾಧತೆ, ಅಪಾರವಾಗಿದೆ. ಮನಸ್ಸಿನ ಲೋಕವನ್ನು, ಗೋಪ್ಯತೆಯನ್ನು ಗುರುತಿಸಿವುದು ಕಷ್ಟದ ಕೆಲಸ ಎಂದು ಪರಿಗಣಿಸಲಾಗುತ್ತದೆ.

ಹಾಗೆಯೇ ಈ ಮನಸ್ಸು ಎಂದರೇನು ಎಂದು ತಿಳಿಯುವುದು, ಅದು ಹೇಗೆ ಇದೆ, ಇದೇ ಅವಸ್ಥೆಯಲ್ಲಿದೆ ಎಂದು ಹೇಳುವುದು ಕಷ್ಟದ ಕೆಲಸ. ಮನಸ್ಸು ನಿರ್ವಹಿಸಬಹುದಾದ ಕಾರ್ಯಗಳನ್ನು ನಾವು ತಿಳಿಯಬಹುದೇ ವಿನಃ ಮನಸ್ಸಿನ ಸ್ವರೂಪವನ್ನು ತಿಳಿಯುವುದು ಕಷ್ಟ. ಇಂದಿನ ವೈಜ್ಞಾನಿಕ ಯುಗದಲ್ಲಿ ಕಾಲಿಟ್ಟಿರುವ ಮಾನವ, ಮಂಗಳ ಗ್ರಹಕ್ಕೆ ತಲುಪಿ ಚಂದ್ರಯಾನದಂತಹ ಮಹತ್ತರ ಸಾಧನೆಗಳನ್ನು ಮಾಡ ಬಲ್ಲವನು, ಮಾನಸಿಕ ಶಕ್ತಿಯುಳ್ಳವೆನಿಸಿದ್ದಾನೆ. ಕುಳಿತಲ್ಲಿಯೇ ಜಗತ್ತಿನಾದ್ಯಂತ ನಡೆಯುವ ವಿದ್ಯಮಾನಗಳನ್ನು ತಿಳಿದು ನಿಯಂತ್ರಿಸಬಲ್ಲವನಾಗಿದ್ದಾನೆ. ಈ ಎಲ್ಲಾ ರೀತಿಯ ವರ್ತನೆಗಳನ್ನು ನಾವು ಮನುಷ್ಯನ ಬೇರೆ ಬೇರೆ ಮುಖಗಳು ಎಂದು ಹೇಳಬಹುದಾಗಿದೆ. ಈ ಮನೋವಿಜ್ಞಾನವು ಕೂಡಾ ಮನುಷ್ಯನ ವರ್ತನೆಯ ಅಭ್ಯಾಸವೇ ಆಗಿದೆ.

ಮನೋವಿಜ್ಞಾನ ಮತ್ತು ಕಲೆಯ ಅಧ್ಯಯನ ಸಾಹಿತ್ಯ ರಚನೆ ಯಾವಾಗಲೂ ಸಹಯಕ್ಕಾಗಿ ಪರಸ್ಪರ ಆಶ್ರಯಿಸಬೇಕಾಗುತ್ತದೆ. ಮನೋಘಟನೆಗಳು ನಿಷ್ಪತ್ತಿ ಸಾಧ್ಯಗಳೆಂಬುದು ಮನೋ ವಿಜ್ಞಾನದ ಮುಖ್ಯ ತತ್ವ. ಕಲಾಕೃತಿಯಾಗಲೀ, ಕಲಾವಿದನೇ ಆಗಲೀ ಒಂದು ಮಾನಸಿಕ ಸಂಪೂರ್ಣವೂ, ಸ್ವಪರ್ಯವಸಾಯಿಯೂ ಆಗಿದ್ದು ಎಂಬುದು ಕಲೆಯ ಅಧ್ಯಯನದ ಒಂದು ತತ್ವ.

**ಮುಖ್ಯಪದಗಳು:** ಮನೋವಿಜ್ಞಾನ, ಸಾಹಿತ್ಯ, ವರ್ತನೆ, ಅಂತರ್‌ಶಿಸ್ತೀಯ, ಅಗಾಧತೆ.

**ಪೀಠಿಕೆ:**

ಮನುಷ್ಯನ ವರ್ತನೆಯು ಅವನು ಮಾಡುವ ಕೆಲಸ ಕಾರ್ಯಗಳ ಮೂಲಕ ನಿರ್ಧರಿತವಾಗುತ್ತದೆ. ಅಂದರೆ ಅವನ ಪ್ರವೃತ್ತಿ, ಆಲೋಚನೆ, ಬುದ್ಧಿಶಕ್ತಿ, ಸಾಹಿತ್ಯ ರಚನೆ, ಕಲಿಕೆ ಇವೆಲ್ಲವೂ ಅವನ ಮನೋವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಂರಚನೆಗೊಳ್ಳುತ್ತವೆ. ಸಾಹಿತ್ಯದ ಅಧ್ಯಯನ ಮತ್ತು ರಚನೆಯಲ್ಲಿ ಮನೋ–ವಿಜ್ಞಾನದ ಬಳಕೆ ಒಂದು ಪ್ರಮುಖ ವಿಚಾರ. ಈ ರೀತಿಯಲ್ಲಿ ಅಧ್ಯಯನ ನಡೆಸ ಬಹುದೆಂದು ನಾವು ಪಾಶ್ಚಾತ್ಯ ರಾಷ್ಟ್ರಗಳ ಮೂಲಕ ತಿಳಿದು

ಕನ್ನಡ ಸಾಹಿತ್ಯ ಪ್ರವೇಶಿಸಿದ್ದು, ಅಲ್ಲದೇ ಸಾಹಿತ್ಯದ ಅಧ್ಯಯನ ಮತ್ತು ರಚನೆಗೆ ಹೊಸ ದೀರ್ಘತೆಯನ್ನು ಒದಗಿಸಿದೆ. ಈ ದಿಸೆಯಲ್ಲಿ ಸಿ.ಜಿ.ಯಾಂ ಮನೋ ವಿಜ್ಞಾನ ಮತ್ತು ಸಾಹಿತ್ಯ ಪ್ರಬಂಧವು ನಮಗೆ ಅರಿವು ಮೂಡಿಸುತ್ತದೆ. ಏಕೆಂದರೆ, ಮಾನವನ ಮನಸ್ಸು ಸಾಹಿತ್ಯ ಕಲೆಯ ಜನ್ಮ ಸ್ಥಾನ.

**ಉದ್ದೇಶಗಳು:**

1. ಸಾಹಿತ್ಯ ಮತ್ತು ಮನೋವಿಜ್ಞಾನಕ್ಕೂ ಇರುವ ಸಂಬಂಧ.
2. ಮನೋವಿಜ್ಞಾನ – ಕವಿಯ ಮನೋವ್ಯಾಪಾರಗಳಿಗೆ ಸಂಬಂಧಿಸಿದ್ದು.
3. ಮನೋ ವಿಜ್ಞಾನಿಯ ಸಾಹಿತ್ಯ ವಿಶ್ಲೇಷಣೆ, ಕವಿಯ ಸೃಷ್ಟಿ ಕ್ರಿಯೆಯ ಮೂಲಕ್ಕೆ ನೇರವಾಗಿ ಸಂಬಂಧವಿರುವುದು.

**ವಿಷಯ ವಿವರಣೆ:**

1. **ಸಾಹಿತ್ಯ ಮತ್ತು ಮನೋ ವಿಜ್ಞಾನಕ್ಕೆ ಇರುವ ಸಂಬಂಧ:**

ಪ್ರಜ್ಞಾ ನವನವೋಲ್ಲೇಖಶಾಲಿನಿ ಪ್ರತಿಭಾ ಮತಾ ।
ತದನುಪ್ರಾಣನಾಜೀವದ್‌ವರ್ಣನಾನಿಪುಣಃ ಕವಿಃ॥
26–ಭಟ್ಟತೌತ

ಎಂದರೆ ಹೊಸ–ಹೊಸದಾಗಿ ಉಲ್ಲೇಖಿಸುವ ಸಾಮಾರ್ಥ್ಯವುಳ್ಳ ಪ್ರಜ್ಞಾಶಕ್ತಿಗೆ ಪ್ರತಿಭೆಯೆಂದು ಹೆಸರು. ಆ ಪ್ರತಿಭೆಯನ್ನವಲಂಬಿಸಿ ಜೀವಂತ ವಾದ ವರ್ಣನೆಯನ್ನು ಮಾಡುವುದರಲ್ಲಿ ನೈಪುಣ್ಯವಿರತಕ್ಕನು ಕವಿ.

ಹೀಗೆ ಈ ಮೇಲಿನ ಶ್ಲೋಕವು ಅರ್ಥೈಸುವ ನಿಟ್ಟಿನಲ್ಲಿ ಕವಿ ಸಾಹಿತ್ಯ ರಚನೆ ಮಾಡುವ ನೈಪುಣ್ಯ ಉಳ್ಳವನಾಗಲು ಅವನ ಮನಸ್ಸು ಪ್ರಶಾಂತವಾಗಿದ್ದು ಭಾವನೆಗಳ ಉತ್ಪತ್ತಿಗೆ ಕಾರಣವಾಗುತ್ತದೆ. ಸಾಹಿತ್ಯ ಮತ್ತು ಸಾಹಿತಿಯ ಬುದ್ಧಿ ಮತ್ತು ಭಾವನೆಗಳ ಉತ್ಪನ್ನ. ಈ ಬುದ್ಧಿ ಮತ್ತು ಭಾವಗಳ ಮೂಲ ನೆಲೆ ಮನಸ್ಸು. ಆದ್ದರಿಂದ ಸಾಹಿತ್ಯ ಮಾನವ ಮನಸ್ಸಿನ ಅತ್ಯಂತ ಉತ್ಕೃಷ್ಟ ಉತ್ಪನ್ನಗಳಲ್ಲಿ ಒಂದು ಎಂದು ಹೇಳಬಹುದು.

ಮನಸ್ಸು ಮಾನವನ ವರ್ತನೆಗಳ ಪ್ರಚೋದನೆಗೂ, ನಿಯಂತ್ರಣಕ್ಕೂ, ಕಾರಣವಾದ ಒಂದು ಶಕ್ತಿ ಎಂಬುದಾಗಿ ಹೇಳಬಹುದು. ಮಾನವ ವರ್ತನೆಗಳನ್ನು ಅಧ್ಯಯನ ಮಾಡುವ ಮನೋವಿಜ್ಞಾನ ಸಹಜವಾಗಿಯೇ ಸಾಹಿತ್ಯದ ಕಡೆಗೂ ಗಮನ ಹರಿಸಿದೆ. ಅವುಗಳನ್ನು ಈ ಕೆಳಗಿನ ಅಂಶಗಳಿಂದ ನೋಡಬಹುದು.

- ಸಾಹಿತ್ಯ ರಚನೆ ಒಂದು ಸೃಜನಶೀಲ ಮಾನಸಿಕ ಕ್ರಿಯೆ.
- ಮನಃಶಾಸ್ತ್ರ ಮನುಷ್ಯನ ವರ್ತನೆ, ಅನುಭವ ಅವುಗಳ ಅಭ್ಯಾಸ ಮಾಡುವ ಆಧುನಿಕ ವಿಜ್ಞಾನ
- ಸಾಹಿತ್ಯಾಭಿವ್ಯಕ್ತಿಯನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡುವುದು ಮನೋ ವಿಜ್ಞಾನವಾದ ವ್ಯಾಪ್ತಿಗೆ ಒಳಪಟ್ಟಿದೆ.
- ಸಾಹಿತ್ಯ ಕೃತಿಗಳಲ್ಲಿ ಮನೋವಿಜ್ಞಾನ ಒಂದಲ್ಲ ಒಂದು ರೂಪದಲ್ಲಿ ನೆಲೆಗೊಂಡಿರುತ್ತದೆ.
- ಸಾಹಿತ್ಯ ಕೃತಿಯ ಕರ್ತೃ ಒಬ್ಬ ಮನುಷ್ಯನೇ ಆಗಿರುತ್ತಾನೆ.
- ಮನುಷ್ಯನು ಮನುಷ್ಯನಾಗಿ ತನ್ನ ಅನುಭವ ಅಭಿವ್ಯಕ್ತ ಪಡಿಸಲು ತಲುಪಿಸಲು ರೂಪಿಸಿದ ಮಾಧ್ಯಮ ವೆಂದರೆ ಸಾಹಿತ್ಯ ಕೃತಿ.
- ಸಾಹಿತ್ಯ ಕೃತಿಗಳಲ್ಲಿ ಮನೋ ವೈಜ್ಞಾನಿಕ ವಿಚಾರಗಳು ವಿಪುಲವಾಗಿರುತ್ತವೆ.
- ಇದಕ್ಕೆ ಉದಾಹರಣೆ ಎಂದರೆ ಹೆಣ್ಣಿನ ಮಾನಸಿಕ ಸ್ಥಿತಿಯನ್ನು ಅರಿಯುವ ತ್ರಿವೇಣಿಯವರ ಕಾದಂಬರಿಗಳು.
- ಮನುಷ್ಯನ ಮನಸ್ಸಿಗೆ ಒತ್ತಡ ಆಘಾತಗಳಾದಾಗಿನ ಸ್ಥಿತಿ ಹೇಗಿರುತ್ತದೆ ನಮ್ಮನ್ನು ಎಂಬುದು ಅಧ್ಯಯನಕ್ಕೀಡು ಮಾಡಿ ಸಾಹಿತ್ಯದ ರಚನೆಗೆ ಕಾರಣವಾಗುತ್ತದೆ.

**2. ಮನೋವಿಜ್ಞಾನ–ಕವಿಯ ಮನೋವ್ಯಾಪರಕ್ಕೆ ಸಂಬಂಧಿಸಿದ್ದು**

ಈ ಮನೋವಿಜ್ಞಾನ ಕವಿಯ ಆಂತರ್ಯವನ್ನು ಎಂದರೆ ಮನಸ್ಸನ್ನು ಅರಿತು ಕವಿಯು ಕಾವ್ಯ ಪ್ರಯೋಗ ಶಾಲೆಯನ್ನು ನಮಗೆ ಪರಿಚಯಿಸುತ್ತದೆ. ಸಾಹಿತ್ಯವನ್ನು ಕುರಿತ ಮನೋ ವಿಜ್ಞಾನಿಯ ಈ ವಿಶ್ಲೇಷಣೆ ಸಾಹಿತ್ಯ ವಿಮರ್ಶೆಯ ವಿಧಾನಗಳಲ್ಲಿ ಒಂದು ಎಂದು ಹೇಳಬಹುದು. ಸಾಹಿತ್ಯ ವಿಮರ್ಶೆಯಲ್ಲಿ ಬಾಹ್ಯ ಮತ್ತು ಆಂತರಿಕ ಎಂಬ ಎರಡು ವಿಧಾನಗಳಿವೆ. ಸಾಹಿತ್ಯ ಕುರಿತು ಮನೋವೈಜ್ಞಾನಿಕ ವಿಮರ್ಶೆ ಬಾಹ್ಯ ವಿಧಾನಕ್ಕೆ ಸೇರಿದರೆ ಆಂತರಿಕ ವಿಧಾನವೆನ್ನುವುದು ಕವಿಯು ಮನೋ ವ್ಯಾಪಾರ ಮತ್ತು ಮನೋವಿಜ್ಞಾನದ ಬೆಳಕಿನಲ್ಲಿ ಸಾಹಿತ್ಯದ ರಚನೆ ಮತ್ತು ಅರಿವು ವಿಧಾನಗಳನ್ನು ಹೆಚ್ಚಿಸಲು ಈ ಬಗೆಯು ವಿಮರ್ಶೆ ಪ್ರಯತ್ನಿಸುತ್ತದೆ.

> ಹತಂ ಜ್ಞಾನಂ ಕ್ರಿಯಾಶೂನ್ಯಂ ಹತಾ ಚಾಜ್ಞಾನಿನಃ ಕ್ರಿಯಾ ।
> ಧಾವನ್ನಪ್ಯಂಧಕೋ ನಷ್ಟಃ ಪಶ್ಯನ್ನಪಿ ಚ ಪಂಗುಕಃ ॥ 125–ಯಶಸ್ತಿಲಕ 3–5

ಎಂದರೆ ಕ್ರಿಯೆಯಲ್ಲದ ಬರಿಯ ತಿಳಿವು ನಷ್ಟವಾದಂತೆ (ವ್ಯರ್ಥ) ತಿಳಿವಿಲ್ಲದವನ ಕ್ರಿಯೆಯೂ ನಷ್ಟವೇ. ಕುರುಡನು ಓಡಿದರೂ ಫಲವಿಲ್ಲ, ಕುಂಟನು ನೋಡುತ್ತಿದ್ದರೂ ಫಲವಿಲ್ಲ.

ಹೀಗೆ ಕವಿಯ ಮನೋವ್ಯಾಪಾರ ಎಂಬುದರ ಮನಸ್ಸಿನ ಜ್ಞಾನ, ಮನೋವಿಜ್ಞಾನಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು.

- ಸಾಹಿತ್ಯದ ಮೂಲಕ ಅನೇಕ ತಾತ್ವಿಕ ಚಿಂತನೆಗಳನ್ನು ಸಮಾಜದಲ್ಲಿ ಬಿತ್ತುವ ಕಾರ್ಯ ಮಾಡಲು ಕವಿಯು ಮನೋ ವ್ಯಾಪಾರ–ಮನಸ್ಸು ಎಂಬುದು ಬಹಳ ಮುಖ್ಯ. ಮನೋವಿಜ್ಞಾನ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಕವಿಯ ಸಾಹಿತ್ಯ ಪ್ರಪಂಚಕ್ಕೆ ಊರುಗೋಲಾಗಿ ನಿಲ್ಲಲು ಸಹಾಯಕ.
- ಕವಿಯ ಮನೋವ್ಯಾಪಾರ ಸಾಹಿತ್ಯದ ರಚನೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಅವನ ಮನೋನಿಧಿ ಸರಿಯಿದ್ದರೆ ಪಾತ್ರ ಚಿತ್ರಣ, ವರ್ತನೆ, ಭಾಷೆಯ ಬಳಕೆ ಸಂಭಾಷಣೆ ಅತಿ ಅಚ್ಚುಕಟ್ಟಾಗಿ ಆಕರ್ಷಕವಾಗಿ ಮೂಡಿಬರುತ್ತದೆ.
- ಮನೋವಿಜ್ಞಾನ ಸಾಹಿತ್ಯ ಕ್ಷೇತ್ರದಿಂದ ಭಿನ್ನವೇನಲ್ಲ. ಅಂದರೆ ಕವಿಯ ಮನೋ ವ್ಯಾಪಾರ ಸಾಹಿತ್ಯ ರಚನೆಯಲ್ಲಿಯ ಸೇರ್ಪಡೆಯಾಗುತ್ತದೆ.
- ಸಾಹಿತ್ಯ ಎನ್ನುವುದು ಕವಿಯ ಕಲಾ ನೈಪುಣ್ಯತೆಗೆ ಹಿಡಿದ ಕೈಗನ್ನಡಿಯಾಗುವುದು ಅವನ ಮನೋ ವ್ಯಾಪಾರದಿಂದ
- ಸಾಹಿತ್ಯವು ಮಾನಸಿಕ ಮತ್ತು ವಿಜ್ಞಾನದಂತಹ ಕ್ಷೇತ್ರಗಳಿಗೂ ಕೈಚಾಚುವಷ್ಟು ವಿಶಾಲವೂ ವ್ಯಾಪಕವು ಆದುದು.
- ಮನೋವಿಜ್ಞಾನದ ಹಿನ್ನಲೆಯಲ್ಲಿ ಕೃತಿ, ರಚನೆ, ಅಧ್ಯಯನ ಮಾಡುವುದು ಸಹ ಶೋಧವೇ ಆಗುತ್ತದೆ. ಹಾಗೆ ಮನೋ ವಿಜ್ಞಾನ ಕವಿಯು ಮನೋ ವ್ಯಾಪಾರಕ್ಕೆ ಇರುವ ಸಂಬಂಧವಾಗಿದೆ ಎಂದು ಹೇಳಬಹುದು.

**3. ಮನೋವಿಜ್ಞಾನಿಯ ಸಾಹಿತ್ಯ ವಿಶ್ಲೇಷಣೆ, ಕವಿಯ ಕಾವ್ಯ ಸೃಷ್ಟಿ ಕ್ರಿಯೆಯ ಮೂಲಕ್ಕೆ ನೇರವಾಗಿ ಸಂಬಂಧವಿರುವುದು**

ಕವಿಯ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲೂ ಮನೋವೈಜ್ಞಾನಿಕ ಅಧ್ಯಯನವನ್ನು ಬಳಸಿಕೊಳ್ಳುವುದಿದೆ. ಆದರೆ ಸಾಹಿತ್ಯ ಸೃಷ್ಟಿಗಾಗಲಿ ವಿಮರ್ಶೆಗಾಗಲೀ ಮನೋವಿಜ್ಞಾನವನ್ನು ಬಳಸಿಕೊಳ್ಳುವಾಗ ಸಾಹಿತ್ಯದ ಮೂಲ ಉದ್ದೇಶವಾದ ರಸಾನುಭವಕ್ಕೆ ಪೋಷಕವಾಗಿರುವಂತೆ ನೋಡಿಕೊಳ್ಳ

ಬೇಕಾಗಿರುವುದು ಅಗತ್ಯ. ಸಾಹಿತ್ಯದ ಸೃಷ್ಟಿ ಕ್ರಿಯೆಗೆ ಅಂದರೆ ಕಲೆಗೆ ಮನೋ ವಿಜ್ಞಾನದಿಂದ ಅತಿಯಾಗಿ ಬೇಕಾಗದೇ ಇರಬಹುದು. ಆದರೆ ವಿಮರ್ಶಕನಿಗೆ ಮುಖ್ಯವಾಗಿ ಬೇಕಾಗಬಹುದು.

- ಮನೋವಿಜ್ಞಾನ ಮತ್ತು ಸಾಹಿತ್ಯ ರಚನೆ ಅಂತರ್‌ಶಿಸ್ತೀಯ ಕ್ಷೇತ್ರಗಳು
- ಸಾಹಿತ್ಯ ಕೃತಿಯೊಂದು ಮನೋ ವಿಜ್ಞಾನವನ್ನು ಅಂತರ್ಗತ ಮಾಡಿಕೊಂಡರೆ ಅದು ಕಟ್ಟುಕೊಡುವ ಒಳನೋಟ ವಿಶೇಷವಾಗಿರುತ್ತವೆ.
- ಯಾವುದೇ ಮಾನಸಿಕ ರೋಗಗಳನ್ನು ಹೇಳುವಾಗ ಅದನ್ನು ಕೇಸ್ ಹಿಸ್ಟರಿ ಆಗದೆ, ಸೃಜನಾತ್ಮಕ ಸಾಹಿತ್ಯವನ್ನಾಗಿ ರೂಪಿಸುವ ವಿಧಾನ ವಿಶೇಷತೆ ಸಾಹಿತ್ಯಕ್ಕೆ ಇದೆ.
- ಅದು ಮನೋವೈಜ್ಞಾನಿಕ ನೆಲೆಯಲ್ಲಿ
- ಮನೋ–ವಿಜ್ಞಾನ ಮತ್ತು ಸೃಜನಶೀಲ ಸಾಹಿತ್ಯವು ಅವಿನಾಭವ ಸಂಬಂಧ ಹೊಂದಿದೆ ಎಂದು ಹೇಳಬಹುದು.

**ಉಪ ಸಂಹಾರ:**

ಕಲಾಕೃತಿ ಅಥವಾ ಸಾಹಿತ್ಯವನ್ನು ಮನೋ ವೈಜ್ಞಾನಿಕವಾಗಿ ವ್ಯಾಖ್ಯಾನಿಸುವುದು ನಮ್ಮ ಕೆಲಸ.

ಈ ಕಾರ್ಯವಾಗಬೇಕಾದರೆ, ಕಲಾಕೃತಿಯ ಹಿಂದಿರುವ ಮೂಲ ಅನುಭವಕ್ಕೆ ಲಕ್ಷ್ಯ ಕೊಡಬೇಕೆಂದು ಮುಖ್ಯ ಕಲಾ ಸೃಜನೆಯ ಸಾಹಿತ್ಯ ರಚನೆಯ ಮನೋ ವೈಜ್ಞಾನಿಕ ಬಗೆಯ ಹಿಂದಿರುವ ಅನುಭವಗಳನ್ನು ತೀವ್ರವಾಗಿ ಪರಿಗಣಿಸಬಹುದು.

ಕವಿಯ ಒಂದು ಕೃತಿ ತನ್ನೊಡನೆಯೇ ಹುಟ್ಟಿ ಬೆಳೆದು ಪಕ್ವವಾಗುತ್ತದೆ ಎಂದು ತಿಳಿದಿರುತ್ತಾನೆ. ಶೂನ್ಯದಿಂದ ಕೃತಿ ಅಥವಾ ಸಾಹಿತ್ಯವನ್ನು ಉತ್ಪತ್ತಿ ಮಾಡುತ್ತೇನೆ ಎಂದು ಭಾವಿಸಲಿ ಎರಡಕ್ಕೂ ಭೇದವಿಲ್ಲ. ಮಗು ತಾಯನ್ನೊಂತೋ, ಅಂತೆ ಅವನ ಸ್ವಂತ ಕೃತಿ ಅವನನ್ನು ಮೀರಿ ಬೆಳೆಯುತ್ತದೆ. ಸಾಹಿತ್ಯ ರಚನೆ ಸೃಜನಾತ್ಮಕ ಕೃತಿ ರಚನೆ ಸುಪ್ತಪ್ರಜ್ಞೆಯ ಆಳಗಳಿಂದ ಅಂದರೆ ಮಾತೃ ವಲಯಗಳಿಂದ ಉದ್ಭವಿಸುತ್ತದೆ. ಅದು ಕವಿಯ ಮಾನಸಿಕ ಬೆಳವಣಿಗೆಯನ್ನು ನಿರ್ಣಯಿಸುತ್ತದೆ.

ಶಿಷ್ಯನ ಇಷ್ಟವನ್ನು ಪೂರೈಸುವುದೇ ಗುರುವಿನ ಉದ್ದೇಶ ಆಗಿರಬಾರದು. ನಿಜವಾದ ಗುರುವಿನ ಉದ್ದೇಶ.... ಶಿಷ್ಯನಿಗೆ ಶ್ರೇಯಸ್ಕರ ಯಾವುದು ಎಂಬುದನ್ನು ಗುರು ತಿಳಿದಿರಬೇಕು. ಅದನ್ನು ತಿಳಿಸಬೇಕು. ಅವನೇ ನಿಜಕ್ಕೂ ಗುರು. ಮಕ್ಕಳು ಅಪೇಕ್ಷಿಸಿದ್ದನ್ನೆಲ್ಲಾ ಅಮ್ಮ ಕೊಡುವುದಿಲ್ಲ. ಮಕ್ಕಳ ಬೆಳವಣಿಗೆಗೆ ಬೇಕಾದುದನ್ನೇ ಕೊಡುತ್ತಾಳೆ.

ಹಾಗೆಯೇ ಮನೋವೈಜ್ಞಾನಿಕ ನೆಲೆಯಲ್ಲಿ ಸಾಹಿತ್ಯ ರಚನೆ ಎನ್ನುವುದು ಕೂಡ ಸಾಹಿತ್ಯದ ಬೆಳವಣಿಗೆಗೆ ಪೂರಕವಾದಷ್ಟು ನಾವು ಅದರ ಸಖ್ಯ ಹೊಂದಬೇಕು. ಅಂದಾಗ ಅದು ಅನಿವಾರ್ಯವಾಗದೇ ಇರಲು ಸಾಧ್ಯವಾಗುತ್ತದೆ ಎಂದು ಹೇಳಬಹುದು.

**ಆಕರ ಗ್ರಂಥಗಳು**


1. ಸಾಹಿತ್ಯ ವಿಮರ್ಶೆ
   ಮಾನಸ ಗಂಗೋತ್ರಿ ಮೈಸೂರು,
   ಪುಟಗಳು 13–23.
2. ತ್ರಿವೇಣಿಯವರ ಕಾದಂಬರಿಗಳಲ್ಲಿ
   ಮನೋವೈಜ್ಞಾನಿಕ ನೆಲೆಗಳು –
   ಡಾ. ಅರ್ಚನಾ, ಶೋಧಗಂಗಾ ಭಾಗ–1,
   ಪುಟಗಳು 1–10, ಭಾಗ 7,
   ಪುಟ ಸಂಖ್ಯೆ 239.
3. ಸುಭಾಷಿತಮಂಜರಿ
   ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
4. ಮನೋವಿಜ್ಞಾನ: ಹೆಚ್.ವಿ.ವಾಮದೇವಪ್ಪ
5. ಯೋಗಕ್ಷೇಮಂ ವಹಾಮ್ಯಹಂ
   ಮತ್ತೂರು ಕೃಷ್ಣಮೂರ್ತಿ
6. ದಿನಪತ್ರಿಕೆಗಳು.